ಓ.ಎಸ್.ನಂ. 210-13

ಡಿ.ಡಬ್ಲ್ಯೂ. 2

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು. ದಿ ಃ 31.07.2017.
ಪಾಟೀ ಸವಾಲು ಃ ಶ್ರೀ. ಕೆ ಆರ್ ಕೆ ವಕೀಲರಿಂದ ಃ-

1. ನಾನು 6ನೇ ತರಗತಿಯವರೆಗೂ ಓದಿರುತ್ತೇನೆ. ನಿಮ್ಮ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿವೆಯೇ ಎಂದರೆ ಗೊತ್ತಿಲ್ಲ. ನಾನು ಖರೀದಿಸಿದ ಜಮೀನಿನ ನಂಬರ್, ವಿಸ್ತೀರ್ಣ ಮತ್ತು ಚಕ್ಕು ಬಂದಿಯನ್ನು ಹೇಳಬಲ್ಲೆ. ನಾನು ವೆಂಕಟೇಶಯ್ಯನವರಿಂದ ದಾವಾ 2ನೇ ಆಸ್ತಿಯನ್ನು ಖರೀದಿಸಿರುತ್ತೇನೆ. ವೆಂಕಟೇಶಯ್ಯನವರಿಗೆ ಇಬ್ಬರು ಹೆಂಡತಿಯರಿದ್ದು, ಚಿಕ್ಕ ಹೆಂಡತಿಯ ಹೆಸರು ಭೂ ಲಕ್ಷ್ಮಮ್ಮ ಅವರಿಗೆ 3 ಜನ ಮಕ್ಕಳು ಮತ್ತು ದೊಡ್ಡ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ, ಅವರಿಗೆ 3 ಜನ ಮಕ್ಕಳು ಇದ್ದಾರೆ. ಮೃತ ವೆಂಕಟೇಶಯ್ಯನವರು ಜೀವಿತ ಕಾಲದಲ್ಲಿ ಪೋಸ್ಟ್ ಮಾಸ್ಟರ್ ಆಗಿದ್ದರು ಮತ್ತು ನಂತರ ವ್ಯವಸಾಯ ಮಾಡುತ್ತಿದ್ದರು. ಅವರು ಸಾಯುವ ಕಾಲದಲ್ಲಿ ಆರೋಗ್ಯವಾಗಿದ್ದರು ಎಂದರೆ ನಾವು ಜಮೀನು ಖರೀದಿಸುವ ಸಮಯದಲ್ಲಿ ಆರೋಗ್ಯವಾಗಿದ್ದರು ಎಂದರೆ, ನಾವು ಜಮೀನು ಖರೀದಿಸುವ ಸಮಯದಲ್ಲಿ ಆರೋಗ್ಯವಾಗಿದ್ದು, ಸಾಯುವುದಕ್ಕೂ 2 ವರ್ಷಗಳ ಮುಂಚೆ ಪಾರ್ಶ್ವವಾಯು ಹೊಡೆದಿತ್ತು ಎಂದಿದ್ದಾರೆ.

2. ಅವರ ಮಕ್ಕಳ ಹೆಸರು 1ನೇ ನಂದ ಅಲಿಯಾಸ್ ಅನುರಾಧ, 2ನೇ ಸವಿತಾ, 3ನೇ ನಂದೀಶ ಎಂದಿದ್ದು, ಚಿಕ್ಕ ಹೆಂಡತಿಯವರ ಮಕ್ಕಳು 1 ಮತ್ತು 2 ನೇಯವರ ಹೆಸರು ನನಗೆ ಗೊತ್ತಿಲ್ಲ, 3ನೇ ಯವರ ಹೆಸರು ವರದರಾಜು ಎಂದಿರುತ್ತದೆ. ಇವರ್ಯಾರು ಒಟ್ಟು ಕುಟುಂಬದಲ್ಲಿದ್ದು ಇಂದಿಗೂ ಭಾಗವಾಗಿಲ್ಲವೆಂದರೆ ಅವರೆಲ್ಲ ಬೇರೆ ಬೇರೆ

ವಾಸವಿದ್ದಾರೆ. ಅವರು ವಿಭಾಗ ಪತ್ರ ಮಾಡಿಕೊಂಡಿದ್ದಾರೆ. ಆ ಪತ್ರವನ್ನು ನಾನು ನೋಡಿಲ್ಲ, ಯಾವ ವರ್ಷ ವಿಭಾಗವಾಗಿರುತ್ತದೆಂದು ನನಗೆ ಗೊತ್ತಿಲ್ಲ. ಅವರೆಲ್ಲರೂ ಒಟ್ಟು ಕುಟುಂಬದಲ್ಲಿಯೇ ಇದ್ದು, ಎಂದಿಗೂ ವಿಭಾಗಿಲ್ಲವೆಂದರೆ ಸರಿಯಲ್ಲ.

3. ವಾದಿಯವರು ತಮ್ಮ ವಿವಾಹಕ್ಕೂ ಮೊದಲು ತಂದೆಯ ಮನೆಯಲ್ಲಿಯೇ ಇದ್ದು, ಮದುವೆಯಾದ ನಂತರ ಗಂಡನ ಮನೆಯಲ್ಲಿ ವಾಸವಿದ್ದಾರೆಂದರೆ ಅವರು ತಮ್ಮ ಮೊದಲನೇ ಪತಿಯನ್ನು ಬಿಟ್ಟು, 2ನೇ ಪತಿಯ ಮನೆಯಲ್ಲಿ ವಾಸವಿದ್ದಾರೆಂದು ನುಡಿದಿದ್ದಾರೆ. ನಾನು ದಾವಾ 2ನೇ ಐಟಂ ಆಸ್ತಿಯನ್ನು ನಾನು ಖರೀದಿಸುವ ಸಮಯದಲ್ಲಿ ವಾದಿಯ ಕುಟುಂಬದ ಎಲ್ಲರ ಸಹಿಯನ್ನು ಪಡೆದಿಲ್ಲ ಎಂದರೆ ಸರಿ. ನಿ ಡಿ 11 ಕ್ಕೆ ವಾದಿ ಸಹಿ ಮಾಡಿಲ್ಲ ಎಂದರೆ ಸರಿ. ನಿ ಡಿ 11ನ್ನು ನನಗೆ ಮಾಡಿಕೊಡುವ ಸಮಯದಲ್ಲಿ ವಾದಿಗೆ ಮದುವೆಯಾಗಿದ್ದು ಆಗ ಅವರಿಗೆ ಸುಮಾರು 20 ರಿಂದ 22 ವರ್ಷ ಇರಬಹುದು. ನಾನು ಕಂದಾಯ ಇಲಾಖೆಯವರೊಂದಿಗೆ ಸೇರಿ ನಿ ಡಿ 11 ಕ್ಕೆ ಸೇರಿದ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ, ನಿ ಡಿ 11 ರ ಮೂಲ ಪ್ರತಿಯನ್ನು ಬ್ಯಾಂಕ್‌ನಲ್ಲಿ ಸಾಲಕ್ಕಾಗಿ ಆಧಾರ ಇಡಲಾಗಿದೆ. ಆಧಾರವಾಗಿ ಇಟ್ಟ ಬಗ್ಗೆ ನಾನು ಲಿಖಿತ ಪ್ರತಿವಾದ ಪತ್ರದಲ್ಲಿ ಹೇಳಿರುತ್ತೇನೆ.

4. ದಾವಾ 2ನೇ ಐಟಂ ಸ್ವತ್ತಿನಲ್ಲಿ ಇಂದಿಗೂ ವಾದಿ ಮತ್ತು 1 ರಿಂದ 6 ನೇ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ, ಈ ಸ್ವತ್ತನ್ನು ಅವರೇ ಅಭಿವೃದ್ಧಿಪಡಿಸುತ್ತಿದ್ದಾರೆಂದರೆ ಸರಿಯಲ್ಲ, ವಾದಿಗಳ ಒಟ್ಟು ಕುಟುಂಬದಲ್ಲಿ ಯಾವುದೇ ವಿಭಾಗವಾಗದಿದ್ದರೂ, ವಿಭಾಗವಾಗಿದೆಯೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ, ಈ ಸ್ವತ್ತಿಗೆ ಕಂದಾಯ ಕಟ್ಟಿದ ಬಗ್ಗೆ ಯಾವುದೇ ರಸೀದಿಗಳನ್ನು ಹಾಜರುಪಡಿಸಿಲ್ಲ ಎಂದರೆ,

1 ರಸೀದಿಯನ್ನು ಹಾಜರುಪಡಿಸಿದ್ದೇನೆಂದು ನುಡಿಯುತ್ತಾರೆ. ಆ ಕಂದಾಯ ರಸೀದಿ ನಿ ಡಿ 14 ನ್ನು ಈ ದಾವೆಗಾಗಿಯೇ ಸೃಷ್ಟಿ ಮಾಡಿಕೊಂಡು ನನ್ನ ಸ್ವಾಧೀನವನ್ನು ತೋರಿಸಲು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ನನ್ನ ಸಮಕ್ಷಮ ತೆ ನ್ಯಾ ಬೆ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಪ್ರಭಾರ ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಗುಬ್ಬಿ